ಶಶಾಂಕ

೨೦೧೯-೨೦೨೦ನೇ ಸಾಲಿನ ಕನ್ನಡ ಗೋಡೆ ಪತ್ರಿಕೆ

ಕನ್ನಡ ವಿಭಾಗ, ಶೇಷಾದ್ರಿಪುರಂ ಕಾಲೇಜು,

#27, ನಾಗಪ್ಪಚೀಡಿ, ಶೇಷಾದ್ರಿಪುರಂ, ಬೆಂಗಳೂರು - 560 020

ಮಲೆಗಳಲ್ಲಿ ಮದುಮಗಳು

೧೦೦ನೇ ಪ್ರದರ್ಶನ

ರಾಷ್ಟ್ರೀಯ ನಾಟಕ ಶಾಲೆ, ಬೆಂಗಳೂರು ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ಮಲೆಗಳಲ್ಲಿ ಮದುಮಗಳು ನಾಟಕ ತನ್ನ ೧೦೦ನೇ ಪ್ರದರ್ಶನವನ್ನು ಫೆಬ್ರವರಿ ೧೦ ರಂದು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ರಂಗರೂಪ, ಸಂಗೀತ, ನಿರ್ದೇಶನ

ಭೀಮ ಕಾದಂಬರಿಯನ್ನು ಕೆ.ವೈ.ನಾರಾಯಣಸ್ವಾಮಿ ಅವರು ರಂಗರೂಪಕ್ಕೆ ತಂದಿದ್ದಾರೆ. ಸಂಗೀತ ನಿರ್ದೇಶಕ ಹುಸಲೇಜು ಅವರು ನಾಟಕಕ್ಕೆ ಸಂಗೀತ ನೀಡಿದ್ದಾರೆ. ಸಿ.ಬಸವಲಿಂಗಯ್ಯ ಅವರ ಪರಿಕಲ್ಪನೆ ಮತ್ತು ನಿರ್ದೇಶನದಲ್ಲಿ ನಾಟಕ ಮೂಡಿಬಂದಿದೆ

೧೨೦ ಕಲಾವಿದರು, ೮ ಸ್ಟೇಜುಗಳು

ನಾಟಕಕ್ಕೆ ಎನ್‌ಎಸ್‌ಡಿಯ ೨೦ ಮಂದಿ ಕಲಾವಿದರನ್ನು ಬಳಸಿಕೊಳ್ಳಲಾಗುತ್ತದೆ. ಜತೆಗೆ ಹಲೆ ಕಲಾವಿದರು ೫೦ ಮಂದಿ, ಉಳಿದಂತೆ ಇತರರು ಸೇರಿ ಒಟ್ಟಾರೆ ೧೨೦ ಮಂದಿ ಕಲಾವಿದರು ಅಭಿನಯಿಸಲಿದ್ದಾರೆ. ಕರ್ನಾಟಕ ಕಲಾವಿದರಲ್ಲದೇ ನೆರೆ ರಾಜ್ಯಗಳ ಕಲಾವಿದರೂ ಸಹ ಅಭಿನಯಿಸುತ್ತಿರುವುದು ವಿಶೇಷ. ಸುಮಾರು ೯ ಎಕರೆ ವಿಸ್ತೀರ್ಣದ ರಂಗ ಸಜ್ಜಿಕೆಯೊಂದಿಗೆ ಕೆರೆಯಂಗಳ, ಜಿದಿರುಮಲೆ, ಬಯಲುರಂಗ ಮತ್ತು ಹೊಂಗೆರಂಗ ಎಂಬ ನಾಲ್ಕು ವೇದಿಕೆಗಳಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿದ್ದ ಮಲೆನಾಡಿನ ಪರಿಸರವನ್ನು ವೇದಿಕೆಗಳಲ್ಲಿ ಒಡಮೂಡಿಸಿ ವಿಶಾಲ ರಂಗವೇದಿಕೆಗಳ ಮೂಲಕ ನಾಟಕ ಅಭಿನಯ ಮಾಡಲಾಗುತ್ತದೆ. ಒಂದು ಬಾರಿಗೆ ಬರೋಬ್ಬರಿ ಒಂದು ಸಾವಿರ ಮಂದಿ ಕುಳಿತು ವೀಕ್ಷಿಸುವ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಈ ನಾಟಕದ ೫೦ನೇ ಅವತರಣಿಕೆ ಜನವರಿ ೨೦ಕ್ಕೆ ಶುರುವಾಗಿದ್ದು ಫೆಬ್ರವರಿ ೨೯ರ ತನಕ ಪ್ರತಿ ಸೋಮವಾರ, ಬುಧವಾರ, ಶುಕ್ರವಾರ, ಮತ್ತು ಶನಿವಾರ ರಾತ್ರಿ ೮ರಿಂದ ಬೆಳಗ್ಗೆ ೬ರ ವರೆಗೆ ನಡೆಯಲಿದೆ.

ಅಲ್ಲಾ ಪಲ್ಲಾ ಕನ್ನಡ
ಎಡದಿಂದ ಬಲಕ್ಕೆ ಅಥವಾ ಬಲದಿಂದ
ಎಡಕ್ಕೆ ಓದಿದರೆ ಒಂದೆ ಪದಗಳಾಯ್ತು ಸಾಲುಗಳು

* ಸಕೋಲ ಬೇಕಾ, ಬೇಡ ಕೋಪ
* ನಾಗಮಣಿ ಮಗನಾ
* ಮದ್ರಾಸಿನ ಸಿದ್ರಾಮ
* ರುಮಾಲು ಶಾಲು ಮಾಯ
* ನೇಗಿದ ಅಲ್ಲಾ ಅಡಗಿನೆ
* ಗಯಾದ ವೇದ ಯಾಗ
* ದಿವಾಕರ ಮಾರಕವಾದಿ
* ಕುಬೇರ ಬಗ್ಗಿ ತಗ್ಗಿ ಬರಬೇಕು
* ತಿಮ್ಮ ಸದಾ ಸಮ್ಮತಿ
* ರೊಡಿನಲ್ಲೇ ನಡಿಬೋ
* ಮನುಜನ ಹೀನ ಜನುಮ
* ಗೂಡಿನಾ ಬಾಲು ಬಾನಾಡಿಗೂ
* ಪಂಜರದ ಗಿಳಿ ಜಪಂ
* ವರದಪ್ಪ ಕೊಡು ಕೊಪ್ಪದ ರವ
* ಗಜಾನನನ ಜಾಗ
* ಕೋಳಿಕೇ ರಂಗ,ನಿಂರು ನೀ ಗರಂ ಕೇಳಿಕೋ
* ವಸಿ ಸೋಡಿ ಕೊಡಿಸೋ ಸಿವ
* ನಗಾರಿ ಭೇರಿ ಗಾನ
* ಕುಬೇರ ಸಿಹಿ ಸರಿ ಸಾಕು, ನಾನು ಸಿಹಿಪ್ಪನ ಸಿಹಿನು ನಾಕು ಸಾರಿ ಸಹಿಸಿರಬೇಕು
* ತೋಳಿನೇ ಲತಾ ಪಾರಿಜಾತ, ಜಾರಿ ಪಾತಾಳ ಸೇರಿತೋ

ಕುವೆಂಪು ಕವಿತೆ



ಇಲ್ಲ,
ಯಾರು ಮುಖ್ಯರಲ್ಲ
ಯಾರು ಅಮುಖ್ಯರಲ್ಲ
ಯಾವುದೂ ಯಕಶ್ಚಿತವಲ್ಲ!

ಇಲ್ಲ,
ಯಾವುದಕ್ಕೂ ಚೌಕಟ್ಟಲ್ಲ;
ಯಾವುದೂ ಚದಿಯಲ್ಲ;
ಯಾವುದೂ, ಎಲ್ಲಿಯೂ ನಿಲ್ಲುವುದೂ ಇಲ್ಲ;
ಕೊನೆಮುಟ್ಟುವುದೂ ಇಲ್ಲ!

ಇಲ್ಲ,
ಅವಸರವೂ ಸಾವಧಾನದ ಬೆನ್ನೇರಿದೆ!
ಇಲ್ಲ,
ಎಲ್ಲಕ್ಕೂ ಇದೆ ಅರ್ಥ;
ಯಾವುದೂ ಅಲ್ಲ ವ್ಯರ್ಥ;
ನೀರೆಲ್ಲವೂ ತೀರ್ಥ!

ಗಿರೀಶ್ ಕಾರ್ನಾಡ್

ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ನಾಟಕಕಾರ. ಅವರ ಈ ನಾಟಕಗಳ ಸಮಗ್ರ ಸಾಹಿತ್ಯಕ್ಕೆ ಜ್ಞಾನಪೀಠ ಬಂದಾಗ ಅದು ಕಾರ್ನಾಡ್‌ರಿಗೆ ಅಥವಾ ಕನ್ನಡಕ್ಕೆ ಮಾತ್ರ ಬಂದ ಪ್ರಶಸ್ತಿಯಾಗಿರಲಿಲ್ಲ ಕನ್ನಡ ನಾಟಕಗಳಲ್ಲಿ ದುಡಿಯುವ ನಟರ ಆತ್ಮಾಭಿಮಾನವನ್ನು ಹೆಚ್ಚಿಸಿತು ಎಂಬುದು ವಿಶಿಷ್ಟವಾದದ್ದು. ಬಹುಮುಖ ಪ್ರತಿಭೆಯ ಕಾರ್ನಾಡ್‌ರಲ್ಲಿ ಒಬ್ಬ ನಾಟಕಕಾರ ಮಾತ್ರ ಇರಲಿಲ್ಲ ಸದಾ ಕ್ರಿಯಾಶೀಲನಾಗಿದ ಒಬ್ಬ ಒಳ್ಳೆಯ ನಟ ಕೊಡ ಇದ್ದ ಎನ್ನುವುದಕ್ಕೆ ಅವರು ಅಭಿನಯಿಸಿದ ಸಂತಶಿಶುನಾಳ ಶರೀಫ ಚಿತ್ರ ಸಾಕ್ಷಿಯಾಗಿದ್ದ ಈ ಚಿತ್ರದಲ್ಲಿನ ಗುರುಗೋವಿಂದ ಭಟ್ಟರ ಕ್ರಾಂತಿಕಾರಕ ನಿಲುವಿನ ಪಾತ್ರದಲ್ಲಿ ಅವರು ಅಭಿನಯಿಸಿದ್ದು ನಾವು ಗುರುಗೋವಿಂದಭಟ್ಟರನ್ನು ನೋಡಿದಷ್ಟೇ ಇಂದಿಗೂ ಅನುಭವಸಾಧ್ಯವಾಗುವಂತೆ ಮಾಡಿದೆ. ಪಾತ್ರಮಾಡುವುದು ಎಂದರೆ ಅಭಿನಯಿಸುವುದು ಮಾತ್ರವಲ್ಲ ಆ ಪಾತ್ರವೇ ತಾನಾಗುವಾಗ ಪಾತ್ರವು ಹೊಂದಬೇಕಾಗುತ್ತದೆ. ಆಗ ಮಾತ್ರ ಆ ಪಾತ್ರ ಮನಸ್ಸಿನಲ್ಲಿ ಉಳಿಯುತ್ತದೆ. ಡಾ.ರಾಜ್ ಕುಮಾರ್ ನಂತರದಲ್ಲಿ ಅಂತಹ ಕೆಲವೇ ಪಾತ್ರಗಳನ್ನು ಕಾರ್ನಾಡ್ ಅಭಿನಯಿಸಿದ್ದು ಈ ಚಲನಚಿತ್ರದಲ್ಲಿ.

ಚಿದಾನಂದ ಮೂರ್ತಿ (ಚಿ.ಮು)

ಚಿದಾನಂದ ಮೂರ್ತಿಯವರು ಕನ್ನಡದ ಹಿರಿಯ ಲೇಖಕ, ವಿದ್ವಾಂಸ, ಸಂಶೋಧಕ ಹಾಗು ಇತಿಹಾಸಜ್ಞ . ಕನ್ನಡ ಭಾಷೆ ಹಾಗೂ ಕರ್ನಾಟಕ ಇತಿಹಾಸ ಕ್ಷೇತ್ರದಲ್ಲಿ ಪ್ರಸಿದ್ಧ ಹೊಂದಿದ್ದಾರೆ.

ಚಿ.ಮು ಅವರ ಜೀವನದ ಮುಖ್ಯ ಘಟ್ಟಗಳು

ಚಿದಾನಂದ ಮೂರ್ತಿಗಳು ೧೯೩೧ನೇ ಮೇ ೧೦ನೆಯ ತಾರೀಖಿನಂದು ಶಿವಮೊಗ್ಗ ಜಿಲ್ಲೆಯ ಜನ್ಮಗಿರಿ ತಾಲೂಕಿನ ಹಿರೆಕೋಗಲೂರಿನಲ್ಲಿ ಹುಟ್ಟಿದರು.
೧೯೫೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನ ಅಧ್ಯಾಪಕರಾಗಿದ್ದರು.
೧೯೯೦ರ ಹೊತ್ತಿಗೆ ಮೈಸೂರಿನ ಮಾನಸಗಂಗೋತ್ರಿ ಸ್ನಾತಕೋತ್ತರ ಕನ್ನಡ ವಿಭಾಗದ ಅಧ್ಯಾಪಕರ್ಯಾ ನಿರ್ವಹಿಸಿದರು. ಚಿದಾನಂದ ಮೂರ್ತಿ ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು.
೧೯೯೦ರ ಅಕ್ಟೋಬರ್ ೧೦ರಂದು ಸ್ವಯಂನಿವೃತ್ತಿಪಡೆದರು.
ಜನವರಿ ೧೧ ೨೦೨೦ರಂದು ದೈವಾಧೀನರಾದರು.



ಸಾಧನೆಗಳು

* ಪಂಪಿಯ ಸ್ಮಾರಕಗಳನ್ನು ಉಳಿಸಲು ಹಾಗೂ ಕನ್ನಡ ಭಾಷೆ ಶಾಸ್ತ್ರೀಯ ಸ್ಥಾನಗಳಿಸಲು ಹೋರಾಟ.
* ಇಪ್ಪತ್ತೈದಕ್ಕೂ ಹೆಚ್ಚು ಪುಸ್ತಕಗಳು, ನಾನ್ನೂರಕ್ಕೂ ಹೆಚ್ಚು ಸಂಪ್ರಬಂಧಗಳ ಪ್ರಕಟಣೆ.
* 'ಭಾಷಾ ವಿಜ್ಞಾನದ ಮೂಲತತ್ವಗಳು', 'ವಾಗರ್ಥ' ಎಂಬ ಎರಡು ಮುಖ್ಯವಾದ ಅವರ ಭಾಷಾಸಂಬಂಧವಾದ ಕೃತಿಗಳ ಪ್ರಕಟಣೆ.

ಕೃತಿಗಳು

* ವೀರಶೈವ ಧರ್ಮ, ಭಾರತೀಯ ಸಂಸ್ಕೃತಿ ಪ್ರಕಾಶನ, ೨೦೦೦
* ವಾಗರ್ಥ, ಬಸ್ಟೋಪ್ರಕಾಶನ,೧೯೮೧
* ವಚನ ಸಾಹಿತ್ಯ ೧೯೭೫
* ಸಂಶೋಧನೆ, ೧೯೯೭

ಕನ್ನಡದ ಮೊದಲುಗಳು

ಆಜ್ಞ ಕನ್ನಡದ ಮೊದಲ ದೊರೆ - ಮಯೂರವರ್ಮ
ಕನ್ನಡದ ಮೊದಲ ಕವಿ - ಪಂಪ
ಕನ್ನಡದ ಮೊದಲ ಶಾಸನ - ಹಲ್ಮಿಡಿ ಶಾಸನ
ತ್ರಿಪದಿ ಛಂದಸ್ಸಿನ ಮೊದಲ ಬಳಕೆ - ಬಾದಾಮಿಯ ಕಪ್ಪೆ ಅರಭಟ್ಟರ ಶಾಸನ
ಕನ್ನಡದ ಮೊದಲ ನಾಟಕ - ಬಿಜ್ಜಳಿಂದ ಗೋಪಿಂದ (ಸಿಂಗರಾರ್ಯ)
ಕನ್ನಡದ ಮೊದಲ ಮಹಮದೀಯ ಕವಿ - ಶಿಶುನಾಳ ಷರೀಫ
ಕನ್ನಡದ ಮೊದಲ ಕವಯಿತ್ರಿ - ಅಕ್ಕಮಹಾದೇವಿ
ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ - ಇಂದಿರಾಬಾಯಿ
ಕನ್ನಡದ ಮೊದಲ ಪತ್ತೆದಾರಿ ಕಾದಂಬರಿ - ಜೋರಗ್ರಹಣ ತಂತ್ರ

14 ಸೆಪ್ಟೆಂಬರ್ 2019 ರಂದು ನಡೆದ
'ಕನ್ನಡ ನಾಟಕಗಳ ಮರುಹುಟ್ಟಿನ ಸಾಹಿತ್ಯ ಮತ್ತು ರಂಗಕಲೆಯೆಡೆಗೆ'
'ರಾಜ್ಯ ಮಟ್ಟದ ಬಿಸಾರ ಸಂಸ್ಕೃತಿ'

04 ಫೆಬ್ರವರಿ 2020 ರಂದು ನಡೆದ
'ಕವಿತೆ ಚಿತ್ರ ಹಿಂದೆ'
ಅಭಿವ್ಯಾಪಕ ಕಾರ್ಯಕ್ರಮ

04.ಸೆಪ್ಟೆಂಬರ್ 2019 ರಂದು ಸಂಜೆ 5:30 ಕ್ಕೆ
ಕನ್ನಡ ಸಾಹಿತ್ಯ ವೇದಿಕೆ, ಶೇಷಾದ್ರಿಪುರಂ ಕಾಲೇಜು ವತಿಯಿಂದ
'ಸಂಸ್ಕೃತಿಗಾಗಿ ಹಂಪಿ' ಲೇಖಕಾಭಿಯೋಜನೆ

04 ಸೆಪ್ಟೆಂಬರ್ 2019 ರಂದು ನಡೆದ
'ಸರ ಕವಿ ಡಿ.ಎಸ್ ಶಿವಪ್ಪಯವರ ಕಾವ್ಯ ಬಿಮರ್ಶೆ'
ಅಭಿವ್ಯಾಪಕ ಕಾರ್ಯಕ್ರಮ

ಪ್ರತಿಯೊಬ್ಬರೂ ಕನ್ನಡ ಭಾಷೆ ಉಳಿಸಿ ಬೆಳೆಸಿ: ಸಾಹಿತಿ ಕು. ವೀರಭದ್ರಪ್ಪ



ಹಲವು ವರ್ಷಗಳಿಂದ ಕನ್ನಡ ನಾಡಿನಲ್ಲಿದ್ದು, ಕರ್ನಾಟಕದ ಅನ್ನ ತಿಂದು ಕನ್ನಡ ಭಾಷೆ ಮಾತಾಡದಿರುವ ದ್ರೋಹಿಗಳಿಗೆ ಕನ್ನಡ ಭಾಷೆ ಮಾತಾಡುವಂತೆ ಪ್ರತಿಯೊಬ್ಬ ಕನ್ನಡಿಗನೂ ಒತ್ತಾಯ ಮಾಡಬೇಕು. ಕರ್ನಾಟಕ ರಾಜ್ಯದ ಹಲವು ಜಿಲ್ಲೆಗಳಲ್ಲಿ ಬೀರಿ ರಾಜ್ಯದಿಂದ ಬಂದು ಇಲ್ಲಿಯೇ ನೆಲೆಸಿ ವ್ಯಾಪಾರ ಮಾಡಿಕೊಂಡು ನೆಲೆಸಿರುವವರಿಗೆ ಕನ್ನಡ ಭಾಷೆ ಬಂದರೂ ಮಾತನಾಡುತ್ತಿಲ್ಲವೆಂದು ಹಿರಿಯ ಸಾಹಿತಿ ಕು. ವೀರಭದ್ರಪ್ಪನವರು ಬೇಸರ ವ್ಯಕ್ತಪಡಿಸಿದರು.

ಸಲಹೆ ಮತ್ತು ಸಹಕಾರ

ಡಾ॥ ವೀರಾ ಎಚ್.ಎನ್ (ಪ್ರಾಚಾರ್ಯರು)
ಹೆಚ್.ಎಂ. ಗೀತಾ, ವಿಭಾಗದ ಮುಖ್ಯಸ್ಥರು
ಎಂ.ಎನ್. ಅರ್ಜುನ ತೇಜಸ್ವಿ, ಸಹ ಪ್ರಾಧ್ಯಾಪಕರು
ಡಿ.ಜಿ. ಸಿದ್ದೇಶ, ಸಹಾಯಕ ಪ್ರಾಧ್ಯಾಪಕರು
ಸತ್ಯಮಂಗಲ ಮಹಾದೇವ, ಸಹಾಯಕ ಪ್ರಾಧ್ಯಾಪಕರು

ಸಂಪಾದಕರು

ಸ್ಪರ್ಶ ಜಿ.ಎ
ಲೇಖಶ್ರೀ ವಿ
ಯೋಗಿತ ಎನ್
ಗಣೇಶ್ ಪ್ರಸಾದ್ ಜಿ.ಎ
ರೋಹಿತ್ ಕುಮಾರ್ ಎಂ.ಎಸ್